2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರ ನ್ಯಾಯಾಲಯದಲ್ಲಿ,
ಬೆಳಗಾವಿ.

ಸೇಷನ್ ಕೇಸ್ ನಂ.22/2025

ಪಿ.ಡಬ್ಲ್ಯೂಃ 7

ಸಿ.ಡಬ್ಲ್ಯೂಃ 7

| | |
|---|---|
| ಸಾಕ್ಷಿಯ ಹೆಸರುಃ | ಶ್ರೀ. ಶಶಿಭೂಷಣ ಶಿವನಗೌಡಾ ಪಾಟೀಲ |
| ತಂದೆಯ ಹೆಸರುಃ | ಶಿವನಗೌಡಾ ಪಾಟೀಲ |
| ವಯಸ್ಸುಃ | 56 ವರ್ಷ |
| ಉದ್ಯೋಗಃ | ವ್ಯಾಪಾರ |
| ವಾಸಃ | ಮಹಾಂತೇಶ ನಗರ, ಬೆಳಗಾವಿ |

**ದಿನಾಂಕಃ 28.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

1. ದಿಃ 18.10.2024 ರಂದು ಮಧ್ಯಾಹ್ನ ಸುಮಾರು 01.00 ರಿಂದ 01.30 ಗಂಟೆಗೆ ನಾನು ಹಾಗೂ ನನ್ನ ಸ್ನೇಹಿತ ಚಾಸಾಃ 8 ರವರು ನಮ್ಮ ಮನೆಯ ಬಳಿ ಇರುವ ಒಂದು ವೃತ್ತದ ಬಳಿ ನಿಂತಿದ್ದೇವು. ಆಗ ಮಾಳಮಾರುತಿ ಪೋಲೀಸ್ ಠಾಣೆಯ ಪೋಲೀಸರು ಬಂದು ಒಂದು DVR ಜಪ್ತು ಪಂಚನಾಮೆಗೆ ಬನ್ನಿ ಎಂದು ಕರೆದಿರುತ್ತಾರೆ ಅದಕ್ಕೆ ನಾವು ಬರುತ್ತೇವೆ ಎಂದು ಒಪ್ಪಿರುತ್ತೇವೆ.

2. ಆ ನಂತರ ನಮ್ಮನ್ನು ಅದೇ ಏರಿಯಾದಲ್ಲಿರುವ ಸೆಕ್ಟರ್ 10 ರಲ್ಲಿರುವ ಮೃತ ಪದ್ಮನ್ನನವರ ಮನೆಯ ಎದುರಿಗೆ ಇರುವ ಹಣ್ಣಿಕೇರಿಯವರ ಮನೆಗೆ ಕರೆದುಕೊಂಡು ಹೋಗಿರುತ್ತಾರೆ. ಆ ಕಾಲಕ್ಕೆ ಹಣ್ಣಿಕೇರಿ ಮನೆಯವರು ಹಾಗೂ ಪೋಲೀಸರು ಇದ್ದರು. ಆ ಕಾಲಕ್ಕೆ ಟಿವಿಯಲ್ಲಿ ದೃಶ್ಯಾವಳಿಗಳನ್ನು DVR ನ್ನು ಬಿಚ್ಚಿ ಪೋಲೀಸರ ಕೈಗೆ ನೀಡಿರುತ್ತಾರೆ. ಅಲ್ಲೇ ಅದನ್ನು ಪೋಲೀಸರು ಪ್ಯಾಕ್ ಮಾಡಿ ಸೀಲ್ ಮಾಡಿ ತೆಗೆದುಕೊಂಡಿರುತ್ತಾರೆ. ಆ ಬಗ್ಗೆ ಪೋಲೀಸರು ಎಲ್ಲಾ ವಿಚಾರಗಳನ್ನು ಬರೆದುಕೊಂಡು ನಮ್ಮ ಸಹಿ ಪಡೆದಿರುತ್ತಾರೆ. ಅದು ಜಪ್ತು ಪಂಚನಾಮೆಯಾಗಿತ್ತು.

3. ಸಾಕ್ಷಿಯು ಈಗ ಎರಡು ದಾಖಲೆಗಳನ್ನು ನೋಡಿ ಒಂದು ಪೋಲೀಸರು ನನಗೆ ಪಂಚನಾಮೆ ಬನ್ನಿ ಎಂದು ನೀಡಿದ ನೋಟೀಸ್ ಎಂದು, ಮತ್ತೊಂದು ನಾನು ನೀಡಿದ ಒಪ್ಪಿಗೆ ಪತ್ರ ಎಂದು ಗುರುತಿಸುತ್ತಾರೆ. ಅವುಗಳನ್ನು ಈಗ ಕ್ರಮವಾಗಿ ನಿಪಿಃ 24 ಮತ್ತು 25 ಎಂದು, ಸಾಕ್ಷಿಯ ಸಹಿಗಳನ್ನು ನಿಪಿಃ 24(ಎ) ಮತ್ತು 25(ಎ) ಎಂದು ಗುರುತಿಸಲಾಯಿತು. ಮತ್ತೊಂದು ದಾಖಲೆಯನ್ನು ನೋಡಿ ಇದು ಪಂಚನಾಮೆ ಎಂದು ಅದರಲ್ಲಿ ನನ್ನ ಸಹಿಗಳು ಇವೆ ಎಂದು ಗುರುತಿಸುತ್ತಾರೆ. ಅದನ್ನು ಈಗ ನಿಪಿಃ 26 ಎಂದು, ಸಾಕ್ಷಿಯ ಸಹಿಗಳನ್ನು ನಿಪಿಃ 26(ಎ) ಮತ್ತು 26(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಈಗ 4 ಫೋಟೋಗಳನ್ನು ನೋಡಿ ಇವುಗಳನ್ನು ಆ ಕಾಲಕ್ಕೆ ತೆಗೆದ ಫೋಟೋಗಳು ಎಂದು ಗುರುತಿಸುತ್ತಾರೆ. ಅವುಗಳನ್ನು ಒಟ್ಟಾರೆಯಾಗಿ ಈಗ ನಿಪಿಃ 27 ಎಂದು ಗುರುತಿಸಲಾಯಿತು.

4. ಆ ದಿನ ಪಂಚನಾಮೆಯನ್ನು ಮಧ್ಯಾಹ್ನ 01.00 ರಿಂದ 01.30 ವರೆಗೂ ಮಾಡಿರಬಹುದು ಎಂದು ಹೇಳುತ್ತಾರೆ. ಈಗ ಅರಗಿನಿಂದ ಸೀಲ್ ಮಾಡಿ ಪ್ಯಾಕ್ ಮಾಡಿರುವ ಒಂದು ಪ್ಯಾಕೇಟನ್ನು ಸಾಕ್ಷಿಗೆ ತೋರಿಸಿದ್ದು ಅದರ ಮೇಲೆ ಅಂಟಿಸಿರುವ ಚೀಟಿಯಲ್ಲಿ ನನ್ನ ಸಹಿ ಇದೆ ಎಂದು ಗುರುತಿಸುತ್ತಾರೆ. ಅದನ್ನು ಮುಕ್ತ ನ್ಯಾಯಾಲಯದಲ್ಲಿ ತೆರೆದಿದ್ದು ಅದರಲ್ಲಿ ಒಂದು DVR ಇದ್ದು ಅದನ್ನು ನೋಡಿ ಗುರುತಿಸುತ್ತಾರೆ. ಅದು Prama ಕಂಪನಿಯ DVR ಆಗಿರುತ್ತದೆ. ಅದನ್ನು ಈಗ ನಿಪಿಃ 28 ಎಂದು ಗುರುತಿಸಲಾಯಿತು.

**ಆದೇಶಃ**

ಶ್ರೀ. ಪ್ರಕಾಶ ಜಿ. ದಡೆಮ್ಮನ್ನವರ ವಕೀಲರು ನಾನು ಆರ್.ಸಿ.ಪಿ. ಪರ ವಕೀಲರ ಪರವಾಗಿ ಈ ಪ್ರಕರಣದಲ್ಲಿ ಹಾಜರಾಗುತ್ತೇನೆ ಈ ನ್ಯಾಯಾಲಯವು ಕಾನೂನು ಸೇವಾ ಪ್ರಾಧಿಕಾರದ ವಕೀಲರನ್ನು ಆರೋಪಿತರ ಪರವಾಗಿ ಪ್ರಕರಣ ನಡೆಸಲು ನೇಮಕ ಮಾಡಿಕೊಂಡಿರುವುದನ್ನು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ Writ Petition No.108927/2025 ಪ್ರಕರಣವನ್ನು ದಿಃ 18.11.2025 ರಂದು ದಾಖಲಿಸಿರುತ್ತೇವೆ. ಆದ್ದರಿಂದ ಈ ಪ್ರಕರಣದ ವಿಚಾರಣೆಯನ್ನು Writ petition ಮುಗಿಯುವರೆಗೂ ಮಾಡಬಾರದು ಎಂದು ಕೋರಿರುತ್ತಾರೆ.

ಈ ಪ್ರಕರಣದಲ್ಲಿ ಮೊದಲು ಎ.ಆರ್.ಪಿ. ಎಂಬ ವಕೀಲರು ಆರೋಪಿತರ ಪರ ಹಾಜರಾಗಿದ್ದರು, ಅವರ ಗಮನಕ್ಕೆ ತಂದು ಈ ನ್ಯಾಯಾಲಯವು ದಿಃ 08.07.2025 ರಂದು ಈ ಪ್ರಕರಣದಲ್ಲಿ ವಿಚಾರಣೆಗೆ ದಿನಾಂಕವನ್ನು ನಿಗಧಿಪಡಿಸಿತ್ತು ಅದರಂತೆ ದಿಃ 21.08.2025 ರಿಂದ 23.08.2025 ರವರೆಗೆ ಸತತವಾಗಿ ವಿಚಾರಣೆ ನಡೆಯಬೇಕಾಗಿತ್ತು. ಆದರೆ ಆ ದಿನ ಶ್ರೀ. ಎ.ಆರ್,ಪಿ. ರವರು ಈ ಪ್ರಕರಣದಲ್ಲಿ ಆರೋಪಿತರು NOC vakalath ನ್ನು ಪಡೆದುಕೊಂಡಿರುವುದರಿಂದ ಈ ಪ್ರಕರಣದಿಂದ ನಿವೃತ್ತಿಯಾಗಲು ಅನುಮತಿ ನೀಡಬೇಕೆಂದು ಕೋರಿರುವುದರಿಂದ ಆರೋಪಿತರಿಗೆ ವಕೀಲರ ಅನುಪಸ್ಥಿತಿಯಲ್ಲಿ ವಿಚಾರಣೆ ಮಾಡುವುದು ಸರಿಯಲ್ಲ ಎಂದು ತಿಳಿದು ಸಾಕ್ಷಿಗಳು ಹಾಜರಾಗಿದ್ದರೂ ಸಹಿತ ವಿಚಾರಣೆಯನ್ನು ಮೂಂದೂಡಲಾಯಿತು. ನಂತರ ಆರೋಪಿತರು ಒಬ್ಬ ರವಿರಾಜ ಪಾಟೀಲ ಎಂಬ ವಕೀಲರನ್ನು ನಾವು ಈಗಾಗಲೇ ನೇಮಕ ಮಾಡಿಕೊಂಡಿದ್ದೇವೆಂದು ಆ ದಿನ ನ್ಯಾಯಾಲಯಕ್ಕೆ ತಿಳಿಸಿರುತ್ತಾರೆ. ಆದರೆ ಮುಂದಿನ ವಿಚಾರಣಾ ದಿನಗಳಲ್ಲಿ ಆರೋಪಿತರ ಪರ ವಕೀಲರು ನ್ಯಾಯಾಲಯಕ್ಕೆ ಬಂದಿರುವುದಿಲ್ಲ, ಈ ಕಾರಣಕ್ಕಾಗಿ ದಿಃ 21.08.2025 ರಿಂದ 23.08.2025 ರ ನಡುವೆ ನಿಗಧಿಪಡಿಸಿದ ವಿಚಾರಣೆಯನ್ನು ಮುಂದೂಡಿ ಆರೋಪಿತರ ಕೋರಿಕೆಯಂತೆ ಅವರಿಗೆ ವಕೀಲರನ್ನು ನೇಮಕ ಮಾಡಿಕೊಳ್ಳಲು ಅವಕಾಶ ನೀಡಲಾಯಿತು. ದಿಃ 08.09.2025 ರಂದು ಶ್ರೀ. ರವಿರಾಜ ಸಿ.ಪಾಟೀಲರು ಆರೋಪಿತರ ಪರವಾಗಿ ವಕಾಲತ್ ನ್ನು ನ್ಯಾಯಾಲಯದಲ್ಲಿ ಸಲ್ಲಿಸಿರುತ್ತಾರೆ. ಅವರ ಕೋರಿಕೆಯಂತೆ ವಿಚಾರಣೆಯನ್ನು ಅಕ್ಟೋಬರ್ 2 ನೇ ವಾರದಲ್ಲಿ ನಿಗಧಿಪಡಿಸಲು ಕೋರಿದ್ದರಿಂದ ಮತ್ತೇ ಈ ಪ್ರಕರಣದ ವಿಚಾರಣೆಯನ್ನು ದಿಃ 13.10.2025 ರಿಂದ 15.10.2025 ರವರೆಗೆ ಮರುನಿಗಧಿ ಮಾಡಿತ್ತು.

ದಿಃ 13.10.2025 ರಂದು ಈ ಪ್ರಕರಣದಲ್ಲಿ ಚಾಸಾಃ 24 ಮತ್ತು 25 ರವರನ್ನು ಮುಖ್ಯ ವಿಚಾರಣೆ ಮಾಡಿದ್ದು, ಆದರೆ ಆ ದಿನ ಆರ್.ಸಿ.ಪಿ. ವಕೀಲರು ಸದರಿ ಸಾಕ್ಷಿಗಳನ್ನು ಪಾಟೀ ಸವಾಲು ಮಾಡಲು ಬಂದಿರುವುದಿಲ್ಲ, ಆದರೆ ಅವರ ಸಹೋದ್ಯೋಗಿ ನ್ಯಾಯಾಲಯದಲ್ಲಿ ಹಾಜರಿದ್ದು ತಮ್ಮ ಹಿರಿಯ ವಕೀಲರಿಗೆ ಆರೋಗ್ಯ ಸರಿಯಿಲ್ಲದ ಕಾರಣ ಈ ಎರಡು ಸಾಕ್ಷಿಗಳ ಪಾಟೀ ಸವಾಲಿಗೆ ಸಮಯ ಕೋರಿದ್ದು ನೀಡಿ ಪ್ರಕರಣವನ್ನು ಮುಂದೂಡಲಾಯಿತು. ಆದರೆ ದಿಃ 14.10.2025 ರಂದು ಈ ಪ್ರಕರಣದ ವಿಚಾರಣೆ

ಜಾರಿಯಲ್ಲಿದ್ದರೂ ಸಹಿತ ಆರ್.ಸಿ.ಪಿ. ವಕೀಲರಾಗಲಿ ಅವರ ಸಹೋದ್ಯೋಗಿ ವಕೀಲರಾಗಲಿ ನ್ಯಾಯಾಲಯದಲ್ಲಿ ಹಾಜರಿರುವುದಿಲ್ಲ. ಈ ಪ್ರಕರಣದಲ್ಲಿ ಆದ ಈ ಮೇಲೆ ಹೇಳಿದ ಎಲ್ಲಾ ಸಂಗತಿಗಳನ್ನು ಪರಿಶೀಲಿಸಿದ ನಂತರ ನ್ಯಾಯಾಲಯಕ್ಕೆ ಮನವರಿಕೆ ಆಗಿದ್ದೇನೆಂದರೆ ಆರೋಪಿತರು ಹಾಗೂ ಅವರ ವಕೀಲರು ಉದ್ದೇಶಪೂರ್ವಕವಾಗಿ ಈ ಪ್ರಕರಣದ ವಿಚಾರಣೆಯನ್ನು ಏನಾದರೂ ಮಾಡಿ ಮುಂದೂಡಬೇಕೆಂಬ ಉದ್ದೇಶ ಹೊಂದಿದ್ದಾರೆ ಎಂಬ ಕಾರಣಕ್ಕಾಗಿ ಹಾಗೂ ಅಂತಹ ಸಂದರ್ಭದಲ್ಲಿ ವಿಚಾರಣಾ ನ್ಯಾಯಾಲಯವು ಮಾನ್ಯ ಉಚ್ಚ ನ್ಯಾಯಾಲಯದ ನಿರ್ದೇಶನದಂತೆ ಕಾನೂನು ಸೇವಾ ಪ್ರಾಧಿಕಾರದ ವಕೀಲರನ್ನು ಆರೋಪಿತರ ಪರ ವಕೀಲರನ್ನಾಗಿ ನೇಮಕ ಮಾಡಿಕೊಂಡು ಪ್ರಕರಣ ನಡೆಸಲು ಸಾಕಷ್ಟು ಸಂದರ್ಭಗಳಲ್ಲಿ ನಿರ್ದೇಶನ ನೀಡಿರುವುದರಿಂದ ನ್ಯಾಯಾಲಯವು ಆ ದಿನವೇ ಬೆಳಗಾವಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರಕ್ಕೆ ಪತ್ರ ಬರೆದು ಅವರ ಪ್ಯಾನಲ್ ನಿಂದ ಯಾರಾದರೂ ವಕೀಲರನ್ನು ಆರೋಪಿತರ ಪರವಾಗಿ ಪ್ರಕರಣ ನಡೆಸಲು ನೇಮಕ ಮಾಡಬೇಕೆಂದು ಪತ್ರ ಬರೆದಿದ್ದರಿಂದ ಆ ದಿನವೇ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಮುಖ್ಯ ಕಾನೂನು ಅಭಿರಕ್ಷಕರಾದ ಶ್ರೀ. ಎಲ್.ಎಂ.ಎಚ್. ರವರನ್ನು ಈ ಪ್ರಕರಣದಲ್ಲಿ ಆರೋಪಿತರ ಪರವಾಗಿ ಪ್ರಕರಣ ನಡೆಸಲು ನೇಮಕ ಮಾಡಿರುತ್ತಾರೆ ಅದರಂತೆ ಶ್ರೀ. ಎಲ್.ಎಂ.ಎಚ್. ರವರ ಅನುಪಸ್ಥಿತಿಯಲ್ಲಿ ಆ ದಿನ ಹಾಜರಿದ್ದ ಚಾಸಾಃ 27 ರವರ ಸ್ವಲ್ಪ ಭಾಗದ ಮುಖ್ಯ ವಿಚಾರಣೆಯನ್ನು ಮಾಡಿ ಪ್ರಕರಣವನ್ನು ಮರುದಿನಕ್ಕೆ ಮುಂದೂಡಲಾಯಿತು. ಆದರೆ ದಿಃ 15.10.2025 ರಂದು ನ್ಯಾಯಾಲಯವು ಬೇರೆ ಪ್ರಕರಣದ ವಿಚಾರಣೆಯಲ್ಲಿ ತೊಡಗಿದ್ದರಿಂದ ಈ ಪ್ರಕರಣದ ಸಾಕ್ಷಿದಾರರನ್ನು ವಿಚಾರಣೆ ಮಾಡಲಾಗದ ಕಾರಣ ಮತ್ತೇ ಹೊಸದಾಗಿ ವಿಚಾರಣಾ ದಿನಾಂಕವನ್ನು ನಿಗಧಿ ಮಾಡಲು ಪ್ರಕರಣವನ್ನು ದಿಃ 24.10.2025 ಕ್ಕೆ ಮುಂದೂಡಲಾಯಿತು. ಅದರಂತೆ ದಿಃ 24.10.2025 ರಂದು ಈ ಪ್ರಕರಣದಲ್ಲಿ ಹೊಸ ವಿಚಾರಣಾ ದಿನಾಂಕವನ್ನು ನಿಗಧಿಪಡಿಸಲಾಯಿತು. ಅದರಂತೆ ದಿಃ 25.11.2025 ರಿಂದ ಸತತವಾಗಿ 29.11.2025 ರವರೆಗೆ ವಿಚಾರಣೆ ಮಾಡಲು ದಿನಾಂಕವನ್ನು ನಿಗಧಿಪಡಿಸಲಾಗಿ ವಿಚಾರಣೆ ನಡೆಯುತ್ತಿದೆ. ಇಂತಹ ಸಂದರ್ಭದಲ್ಲಿ ಶ್ರೀ. ಆರ್.ಸಿ.ಪಿ. ಪರ ವಕೀಲರು ಸಲ್ಲಿಸಿರುವ ಮೆಮೋ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶಗಳಿಗೆ ವಿರುದ್ಧವಾಗಿದೆ. ಆದ್ದರಿಂದ ಅವರ ಮೆಮೋವನ್ನು ಯಾವುದೇ ಕಾರಣದಿಂದಲೂ ಪರಿಗಣಿಸಲು ಸಾಧ್ಯವಿಲ್ಲದ ಕಾರಣ ತಿರಸ್ಕರಿಸಲಾಯಿತು.

ಈ ಹಂತದಲ್ಲಿ ಹಾಜರಿದ್ದ ಆರ್.ಸಿ.ಪಿ. ವಕೀಲರ ಸಹೋದ್ಯೋಗಿಗೆ ಈಗಲಾದರೂ ಈ ಪ್ರಕರಣದಲ್ಲಿ ಆರೋಪಿತರ ಪರವಾಗಿ ಪ್ರಕರಣ ನಡೆಸಲು ತಯಾರಿದ್ದರೆ ಈ ಸಾಕ್ಷಿಯ ಪಾಟೀ ಸವಾಲನ್ನು ಮಾಡಬಹುದು ಎಂದು ಹೇಳಿದ್ದು, ಆದರೆ ಅವರು ನಾವು ಉಚ್ಚ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುವುದರಿಂದ ಪಾಟೀ ಸವಾಲನ್ನು ಮಾಡುವುದಿಲ್ಲ ಎಂದು ಹೇಳುತ್ತಾರೆ. ಆದ್ದರಿಂದ ಈಗಾಗಲೇ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದಿಂದ ನೇಮಕವಾಗಿರುವ ಮುಖ್ಯ ಕಾನೂನು ಅಭಿರಕ್ಷಕರಾದ ಶ್ರೀ. ಎಲ್.ಎಂ.ಎಚ್. ರವರಿಗೆ ಈ ಸಾಕ್ಷಿಯ ಪಾಟೀ ಸವಾಲನ್ನು ಮಾಡಲು ಅನುಮತಿ ನೀಡಿ ಪ್ರಕರಣವನ್ನು ನಡೆಸಲಾಯಿತು.

**ಪಾಟೀ ಸವಾಲುಃ 1 ರಿಂದ 5 ನೇ ಆರೋಪಿತರ ಪರ ಶ್ರೀ. ಎಲ್.ಎಂ.ಎಚ್. ವಕೀಲರಿಂದಃ**

5. ನನಗೆ ಹಾಗೂ ಚಾಸಾಃ 8 ರವರಿಗೆ ಮೃತ ಸಂತೋಷ ಪದ್ಮಣ್ಣನವರ ಹಾಗೂ ರಾಜು ಪದ್ಮಣ್ಣನವರ ಪರಿಚಯ ಇದೆ ಎನ್ನುವುದು ಸರಿ. ಆದರೆ ಅವರುಗಳು ನನ್ನ ಸ್ನೇಹಿತರು ಎಂದರೆ ಸರಿಯಲ್ಲ. ಮಾಳಮಾರುತಿ ಭಾಗದ ಕಡೆ ನಾನು, ಚಾಸಾಃ 8 ಹಾಗೂ ರಾಜು ಪದ್ಮಣ್ಣನವರ ಸೇರಿ ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತೇವೆ ಎಂದು ಸೂಚಿಸುವುದು ಸರಿಯಲ್ಲ. ನಾನು ಹಾಗೂ ಚಾಸಾಃ 8 ರವರು ಮಾಳಮಾರುತಿ ಪ್ರದೇಶದಲ್ಲಿ ರಾಜಕಾರಣದಲ್ಲಿ ಗುರುತಿಸಿಕೊಂಡಿದ್ದೇವೆ ಎಂದರೆ ಸರಿ. ಆ ಭಾಗದಲ್ಲಿ ಯಾರಾದರೂ ಜನಗಳು ಏನಾದರೂ ಸಹಾಯ ಕೇಳಿದರೆ ನಾವು ಮಾಡುತ್ತೇವೆ ಎನ್ನುವುದು ಸರಿ. ಅದೇರೀತಿ ಜನಗಳಿಗೆ ಯಾವುದಾದರೂ ಸಮಸ್ಯೆ ಇದ್ದರೇ ಮಾಳಮಾರುತಿ ಪೋಲೀಸ್ ಠಾಣೆಯ ಕಡೆಗೆ ಹೋಗುತ್ತೇವೆ ಎನ್ನುವುದು ಸರಿ. ನಾವು ರಾಜಕಾರಣದಲ್ಲಿ ಗುರುತಿಸಿಕೊಂಡಿರುವುದರಿಂದ ಮಾಳಮಾರುತಿ ಪೋಲೀಸರು ನಮಗೆ ಗುರುತು ಇರುತ್ತದೆ ಎಂದರೆ ಸರಿ. ಮೃತ ಸಂತೋಷ ಪದ್ಮಣ್ಣನವರ ಸಹ ರಿಯಲ್ ಎಸ್ಟೇಟ್ ವ್ಯವಹಾರ ಮಾಡಿ ಸಾಕಷ್ಟು ಹಣ ಸಂಪಾದನೆ ಮಾಡಿದ್ದರಿಂದ ಆ ಭಾಗದ ಜನರಿಗೆ ಪರಿಚಯಸ್ಥರು ಎಂದರೆ ಸರಿ. ಅದೇರೀತಿ ಆತನ ಸಹೋದರ ರಾಜು ಪದ್ಮಣ್ಣನವರ ಸಹ ತಮ್ಮ ವ್ಯವಹಾರದ ಕಾರಣಕ್ಕಾಗಿ ಆ ಕಡೆಯ ಜನರಿಗೆ ಪರಿಚಯಸ್ಥರು ಎಂದರೆ ಸರಿ. ಅದೇರೀತಿ ರಾಜು ಪದ್ಮಣ್ಣನವರ ಹಾಗೂ ಸಂತೋಷ ಪದ್ಮಣ್ಣನವರ ಲಿಂಗಾಯತ ಸಂಘಟಣೆಯಲ್ಲೂ ಸಹ ಭಾಗವಹಿಸುತ್ತಿದ್ದರು ಎನ್ನುವುದು ಸರಿ.

6. ನಾನು ಮಾಳಮಾರುತಿ ಪೋಲೀಸ್ ಠಾಣೆಯ ಸಾಕಷ್ಟು ಪ್ರಕರಣಗಳಲ್ಲಿ ಪಂಚನಾಗಿ ಭಾಗವಹಿಸಿದ್ದೇನೆಂದರೆ ಸರಿಯಲ್ಲ. ನೋಟೀಸನಲ್ಲಿ ಇಂತಹದ್ದೇ ದಿನಾಂಕ ಹಾಗೂ ಸಮಯಕ್ಕೆ ಪಂಚನಾಮೆಗೆ ಬನ್ನಿ ಎಂದು ಬರೆದಿಲ್ಲ ಎಂದರೆ ಸರಿ. ಅದಲ್ಲದೇ ಯಾವ ಪ್ರಕರಣದ ತನಿಖೆಯ ಪಂಚನಾಮೆಗೆ ಎಂದು ನೋಟೀಸನಲ್ಲಿ ನಮೂದಿಸಿಲ್ಲ ಎಂದರೆ ಸರಿ. ಪಂಚನಾಮೆಗೆ ಹೋಗಿದ್ದ ಮನೆಯ ಚೆಕ್ಕುಬಂದಿಯನ್ನು ಹೇಳಲು ಬರುವುದಿಲ್ಲ. ಪಂಚನಾಮೆಯ ವಿಚಾರಗಳನ್ನು ಹೀಗೆಯೇ ಬರೆಯಿರಿ ಎಂದು ನಾನೇನು ಹೇಳಿ ಬರೆಸಿಲ್ಲ ಎಂದರೆ ಸರಿ. ನಿಪಿಃ 28 ಯಾವ ಕಂಪನಿ ತಯಾರಿಸಿದ್ದು ಎಂದು ನನಗೆ ಹೇಳಲು ಬರುವುದಿಲ್ಲ. ಹಣ್ಣಿಕೇರಿಯವರ ಮನೆಯ ಹೊರಗಿನ ಚಿತ್ರಣವನ್ನು ಫೋಟೋವನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಸಾಕ್ಷಿ ಹೇಳುತ್ತಾರೆ ನಿಪಿಃ 27 ಫೋಟೋಗಳು ಅವರ ಮನೆಯ ಒಳಗಿನವು ಎಂದು ಹೇಳುತ್ತಾರೆ.

7. DVR ನಲ್ಲಿದ್ದ ದೃಶ್ಯಾವಳಿಗಳನ್ನು ಟಿವಿಯಲ್ಲಿ ತೋರಿಸಿದ ಬಗ್ಗೆ ಫೋಟೋಗಳನ್ನು ಹಾಜರುಪಡಿಸಿಲ್ಲ ಎನ್ನುವುದು ಸರಿ. DVR ನ್ನು ಜಪ್ತು ಮಾಡುವ ಮುನ್ನ ಅದರಲ್ಲಿದ್ದ ದೃಶ್ಯಾವಳಿಗಳನ್ನು ನಾನು ನೋಡಿದ್ದೇನೆಂದು ಸುಳ್ಳು ಸಾಕ್ಷ್ಯ ನುಡಿದಿದ್ದೇನೆಂದು ಸೂಚಿಸುವುದು ಸರಿಯಲ್ಲ. ನಿಪಿಃ 27 ರಲ್ಲಿ ಅದನ್ನು ತೆಗೆದ ದಿನಾಂಕ ಹಾಗೂ ಸಮಯ ನಮೂದು ಇಲ್ಲ ಎನ್ನುವುದು ಸರಿ.

ಪ್ರಶ್ನೆಃ ನಿಪಿಃ 27 ಫೋಟೋಗಳನ್ನು ಯಾವ ಕಾರಣಕ್ಕಾಗಿ ತೆಗೆದರು ಎಂದು ಹೇಳಲು ಬರುತ್ತದೇಯೇ ?
ಉತ್ತರಃ ಈ ರೀತಿಯ ಪಂಚನಾಮೆಯನ್ನು ಮಾಡಿದ್ದೇವೆ ಎಂದು ದಾಖಲು ಮಾಡಿಕೊಳ್ಳಲು ನಿಪಿಃ 27 ನ್ನು ತೆಗೆಸಿರುತ್ತಾರೆ.

8. ನಿಪಿಃ 27 ನ್ನು ಮಾಳಮಾರುತಿ ಪೋಲೀಸ್ ಠಾಣೆಯಲ್ಲಿ ತೆಗೆದಿದ್ದಾರೆ ಎನ್ನುವುದು ಸರಿಯಲ್ಲ. ನಿಪಿಃ 28 ನ್ನು ಯಾವುದೋ ಎಲೆಕ್ಟ್ರಾನಿಕ್ಸ ಅಂಗಡಿಯಿಂದ ತಂದು ಅದನ್ನು ಹಣ್ಣಿಕೇರಿ ಮನೆಯವರಿಂದ ಜಪ್ತು ಮಾಡಿದ್ದೇವೆಂದು ತೋರಿಸಲು ಠಾಣೆಯಲ್ಲೇ ಕುಳಿತು ನಿಪಿಃ 26 ರಂತಹ ಪಂಚನಾಮೆಯನ್ನು ಬರೆದು ನಮ್ಮ ಸಹಿ ಪಡೆದಿದ್ದಾರೆಂದು ಸೂಚಿಸುವುದು

ಸರಿಯಲ್ಲ. ರಾಜು ಪದ್ಮನ್ನನವರ ಹಾಗೂ ಪೋಲೀಸರ ಮಾತುಕೇಳಿ ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿದಿದ್ದೇನೆಂದು ಸೂಚಿಸುವುದು ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಖ್ತಲೇಖನ ನೀಡಿದಂತೆ ಬೆರಳಚ್ಚು ಮಾಡಲಾಗಿ ನಂತರ ಓದಿ ಪರಿಶೀಲಿಸಲಾಯಿತು ಎಂದು ಈ ಮೂಲಕ ಪ್ರಮಾಣೀಕರಿಸಲಾಗಿದೆ).

ಓ ಹೇ ಕೇ ಸರಿ ಇದೆ.

(ಗಂಗಾಧರ ಕೆ.ಎನ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.